ಶೇಖಡ 15ರಷ್ಟು ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶೇಖಡ 3ರಷ್ಟು ಹುದ್ದೆಗಳನ್ನು ಮೀಸಲಿರಿಸಿದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕಂ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಲ್ಲಿ ಸದರಿ ಅಭ್ಯರ್ಥಿಗಳಿಗೆ ಹಿಂದಿನ ಮೀಸಲಾತಿ ಆದೇಶದ ಪ್ರಕಾರ ಮೀಸಲಿರಿಸಿದ್ದ ಹುದ್ದೆಗಳನ್ನು ಪುನರ್ ನಿಗದಿಪಡಿಸಿ, ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ 94 ಹುದ್ದೆಗಳನ್ನು ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 19 ಹುದ್ದೆಗಳನ್ನು ನಿಗದಿಪಡಿಸಿ ಉಳಿದ ಹುದ್ದೆಗಳನ್ನು ಹಿಂದುಳಿದ ಮತ್ತು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ವರ್ಗಾಯಿಸಲಾಯಿತು.

ಈ ಹಿನ್ನೆಲೆಯಲ್ಲಿ ಸಾಮಾನ್ಯ ಮತ್ತು ಹಿಂದುಳಿದ ಅಭ್ಯರ್ಥಿಗಳಿಗೆ ದೊರಕಿದ ಸುಮಾರು 42 ಹುದ್ದೆಗಳನ್ನು ತುಂಬಲು ಸದರಿ ವರ್ಗಕ್ಕೆ ಸೇರಿದ ದಿನಾಂಕ 31-12-83ಕ್ಕೆ ಮೊದಲು ಹಿಂದಿನ ಗ್ರಾಮ: ಮಂಡಲ ಪಂಚಾಯಿತಿಗಳಲ್ಲಿ ನೇಮಕವಾಗಿರುವ ಹಾಗೂ ಪ.ಜಾತಿಗೆ ಸೇರಿದ ದಿನಾಂಕ 31-3-96ರಂದು ಕನಿಷ್ಟ 10 ವರ್ಷ ಸೇವೆ ಸಲ್ಲಿಸಿರುವ ಎಲ್ಲಾ ನೌಕರರ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 52 ಗ್ರಾಪಂಕಾ 96 ದಿನಾಂಕ 21-5-96ರಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಕೋರಲಾಗಿದೆ.

ದಿನಾಂಕ 31-7-95ರಂದು 10 ವರ್ಷ ಸೇವೆ ಸಲ್ಲಿಸಿರುವ ಎಲ್ಲಾ ಹಿಂದಿನ ಗ್ರಾಮ:ಮಂಡಲ ಪಂಚಾಯಿತಿ ನೌಕರರನ್ನು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕಂ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ನೇಮಕಾತಿ ಮಾಡಲು ಸಾಕಷ್ಟು ಹುದ್ದೆಗಳು ಲಭ್ಯವಿಲ್ಲದಿರುವ ಪ್ರಯುಕ್ತ ಅರ್ಹರಿರುವ ಎಲ್ಲಾ ಅಭ್ಯರ್ಥಿಗಳನ್ನು ನೇಮಿಸಬೇಕೆಂಬ ಮಾನ್ಯ ಸದಸ್ಯರ ಸಲಹೆಯನ್ನು ಪರಿಗಣಿಸಲು ಸಾಧ್ಯವಾಗುವುದಿಲ್ಲ.

01-40 ಪಿ.ಎಂ.

(ಆ) ಉಳ್ಳಾಲ ಹಾಗೂ ಸೂರತ್ಕಲ್ ಕ್ಷೇತ್ರಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ತೆರೆಯುವುದು.

ಶ್ರೀ ಕೆ.ಜಯರಾಮ ಶೆಟ್ಟಿ (ಉಳ್ಳಾಲ):- ಸನ್ಮಾನ್ಯ ಸಭಾಧ್ಯಕ್ಷರೆ, ಮಂಗಳೂರು ನಗರದಲ್ಲಿ ಸರ್ಕಾರಿ ಕಾಲೇಜು ಒಂದು ಶತಮಾನಗಳಿಂದ ವಿದ್ಯಾದಾನ ಮಾಡುತ್ತಿದ್ದು, ಪಿ.ಯು.ಸಿ.ತರಗತಿಯಿಂದ ಪದವಿ ತರಗತಿಗಳತನಕ ಜಿಲ್ಲೆಯ ವಿಶೇಷವಾಗಿ ಆಸುಪಾಸಿನ ವಿಧಾನಸಭಾ ಕ್ಷೇತ್ರಗಳಿಂದ ಮಂಗಳೂರು, ಉಳ್ಳಾಲ, ಸುರತ್ಕಲ್‌ನಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಪದವಿಪೂರ್ವ ಮತ್ತು ಪದವಿ ತರಗತಿಗಳನ್ನು ಪೂರೈಸಲು ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿತ್ತು. ಪ್ರಸ್ತುತ ಸರಕಾರಿ ಕಾಲೇಜು ಈಗ ಯೂನಿವರ್ಸಿಟಿ ಕಾಲೇಜು ಆಗಿ ಪರಿವರ್ತನೆಗೊಂಡಿದ್ದು ಪಿ.ಯು.ಸಿ. ತರಗತಿಗಳನ್ನು ರದ್ದುಗೊಳಿಸಿರುವುದರಿಂದ ಈ ಕ್ಷೇತ್ರಗಳ ಬಡ ವಿದ್ಯಾರ್ಥಿಗಳಿಗೆ ತುಂಬಾ ಅನ್ಯಾಯವಾಗಿದೆ. ಮಂಗಳೂರು ನಗರ ಮತ್ತು ಹೊರ ವಲಯಗಳಲ್ಲಿ ಬಹಳಷ್ಟು

ಖಾಸಗಿ ಪದವಿಪೂರ್ವ ಕಾಲೇಜುಗಳಿದ್ದು, ಬೇರೆ ಬೇರೆ ವಿಧಾನಗಳ ಶುಲ್ಕಗಳು, ಡೊನೇಷನ್‌ಗಳಿಂದ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳು ತಮ್ಮ ಮುಂದಿನ ವ್ಯಾಸಂಗಗಳಿಂದ ವಂಚಿತರಾಗಿರುತ್ತಾರೆ. ಆದುದರಿಂದ ಈ ಕೊರತೆಗಳನ್ನು ತುಂಬಲು ಮಂಗಳೂರು, ಉಳ್ಳಾಲ, ಸುರತ್ಕಲ್ ಕ್ಷೇತ್ರಗಳಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜುಗಳನ್ನು ತೆರೆದು ಗ್ರಾಮೀಣ ಮತ್ತು ನಗರ ಪ್ರದೇಶಗಳ ಬಡ ವಿದ್ಯಾರ್ಥಿಗಲಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಮಾನ್ಯ ವಿದ್ಯಾ ಮಂತ್ರಿಗಳನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ಅಧ್ಯಕ್ಷರು:- ಉತ್ತರವನ್ನು ತರಿಸಿಕೊಡುತ್ತೇನೆ.

(ಇ) ಕರ್ನಾಟಕ ಗೇರು ಅಭಿವೃದ್ಧಿ ನಿಗಮ, ಪುತ್ತೂರು ವಿಭಾಗದಲ್ಲಿ ಕೆಲಸ ಮಾಡುವ ದಿನಗೂಲಿ ನೌಕರರ ಖಾಯಂಗೆ ಒತ್ತಾಯ.

ಶ್ರೀ ಡಿ.ವಿ.ಸದಾನಂದ ಗೌಡ (ಪುತ್ತೂರು):- ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಪುತ್ತೂರು ವಿಭಾಗದಲ್ಲಿ 1983ನೇ ಇಸವಿಯಿಂದ ಈತನಕ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸಿ ಇ.ಪಿ.ಎಫ್ ಮತ್ತು ಬೋನಸ್ ಪಡೆದುಕೊಂಡು ಬರುತ್ತಿರುವ ಕೊರಪ್ಪಗೌಡ, ಸಂಜೀವಗೌಡ, ಸೋಮಪ್ಪಗೌಡ, ಯು.ರಾಯ, ಕೆ.ಶಿವರಾಮ ಮತ್ತು ಬಿ.ಕೇಶವಗೌಡ ಇವರನ್ನು ಸರ್ಕಾರಿ ಆದೇಶ ಡಿಪಿಎಆರ್:2 ಯುನ್‌ಯಲ್ಸ್ 90, ದಿನಾಂಕ: 6-8-90ರಂತೆ 1-7-84ಕ್ಕೆ ಮುಂಚೆ ಕೆಲಸಕ್ಕೆ ಸೇರಿ ಹತ್ತು ವರ್ಷ ಪೂರ್ಣಗೊಂಡರೂ ಖಾಯಂಗೊಳಿಸದಿದ್ದು ಈ ಬಗ್ಗೆ ಮೇಲಿನ ಆದೇಶದಂತೆ ಸರ್ಕಾರ ತಕ್ಷಣ ಮೇಲ್ಕಾಣಿಸಿದ ದಿನಗೂಲಿ ನೌಕರರನ್ನು ಖಾಯಂಗೊಳಿಸುವಂತೆ ಆದೇಶ ನೀಡಬೇಕಾಗಿ ಒತ್ತಾಯಿಸುತ್ತಿದ್ದೇನೆ.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮಂತ್ರಿಗಳು ಅರಣ್ಯ ಮಂತ್ರಿಗಳ ಪರವಾಗಿ):- ಮಾನ್ಯ ಅಧ್ಯಕ್ಷರೇ, ಸೂಚನೆಯಲ್ಲಿ ಹೇಳಿರುವ ದಿನಗೂಲಿ ನೌಕರರು ನಿಗಮದಲ್ಲಿ 1-7-84ಕ್ಕೆ ಮುಂಚೆ ಕೆಲಸ ಮಾಡುತ್ತಿದ್ದರೂ ಸಹಾ ಅವರು ಮಧ್ಯ ಮಧ್ಯೆ ದೀರ್ಘಕಾಲ ಗೈರು ಹಾಜರಿಯಾಗಿದ್ದೂ ಅಲ್ಲದೆ ನಿಗಮದಲ್ಲಿ ಪೂರ್ಣಕಾಲಿಕ ವೇತನ ಶ್ರೇಣಿಯಲ್ಲಿ ವೇತನವನ್ನು ನಿರ್ಧರಿಸಿ ಖಾಯಂ ಆಗಿ ನೇಮಕಗೊಳಿಸಬೇಕೆಂದು ದಾವೆ ಸಂಖ್ಯೆ: 43: 95ರಲ್ಲಿ ಕಾರ್ಮಿಕ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುತ್ತಾರೆ. ಸದರಿ ಮೊಕದ್ದಮೆಯು ದಿನಾಂಕ:5-9-96ರಂದು ಕಾರ್ಮಿಕ ನ್ಯಾಯಾಲಯದಲ್ಲಿ ವಿಚಾರಣೆಗೆ ಬರುತ್ತದೆ. ಈ ವಿಷಯವು ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಯಾವುದೇ ಕ್ರಮವನ್ನು ಕೈಗೊಳ್ಳಲು ಬರುವುದಿಲ್ಲ. ಕಾರ್ಮಿಕ ನ್ಯಾಯಾಲಯದಿಂದ ಆದೇಶಬಂದ ನಂತರ ನ್ಯಾಯಾಲಯದ ಆದೇಶದಂತೆ ದಿನಗೂಲಿ ನೌಕರರನ್ನು ಖಾಯಂಗೊಳಿಸಲು ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.